ಅ) ಆ ಸಮಾಚಾರ ಕೇಂದ್ರದಲ್ಲಿ ಸಮರ್ಪಕವಾದ ಸಿಬ್ಬಂದಿ ಅಧಿಕಾರಿಗಳು ಕಾರ್ಯನಿರ್ವಹಿಸುವಂತೆ ಸರ್ಕಾರ ಗಮನಹರಿಸಿದೆಯೇ;

ಇ) ಧಾರವಾಡ - ಹುಬ್ಬಳ್ಳಿಯಲ್ಲಿರುವ ಸಮಾಚಾರ ಕೇಂದ್ರದ ಕಾರ್ಯದ ಅರಿವು ಸರ್ಕಾರಕ್ಕಿದೆಯೇ;

ಈ) ಈ ಕೇಂದ್ರದಲ್ಲಿ ಯಾವಾಗಿನಿಂದ ಅಧಿಕಾರಿ ಹುದ್ದೆ ಖಾಲಿ ಇದೆ? ಇದನ್ನು ಭರ್ತಿ ಮಾಡಲು ಸರ್ಕಾರ ಕ್ರಮಕೈಗೊಂಡಿರುವುದಿಲ್ಲ;

ಉ) ಇದರಿಂದ ಸಾರ್ವಜನಿಕರಿಗೆ ಇಲಾಖೆಗಳಿಗೆ ಸುದ್ದಿ ಮಾಧ್ಯಮದ ಪತ್ರಕರ್ತರಿಗೆ ಅನಾನುಕೂಲ ಉಂಟಾಗಿಲ್ಲವೆ;

ಊ) ಈ ನಿರ್ಲಕ್ಷಕ್ಕೆ ಕಾರಣರ್ಯಾರು; ಯಾವಾಗ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು):

ಅ) ಬೆಂಗಳೂರು ಮತ್ತು ಹುಬ್ಬಳ್ಳಿ.

ಆ) ಹೌದು.

ಇ) ಇದೆ.

ಈ) ಹುದ್ದೆ ಖಾಲಿ ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಶಿವಮೊಗ್ಗ ನಗರಕ್ಕೆ ಮಹಿಳಾ ಪ್ರಥಮ ದರ್ಜೆ ಕಾಲೇಜು ಮಂಜೂರ್ಮಾಡುವ ಬಗ್ಗೆ

2002(625) ಶ್ರೀ ಹೆಚ್. ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ನಗರಕ್ಕೆ ಹೊಸದಾಗಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು? (ವಿವರ ನೀಡುವುದು) ?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು):

ಅ) ಇಲ್ಲ

ಉದ್ಭವಿಸುವುದಿಲ್ಲ.

ಶಿವಮೊಗ್ಗ ತಾಲ್ಲೂಕು ಗಾಡಿಕೊಪ್ಪ ಪ್ರದೇಶದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಬಗ್ಗೆ

2003(627) ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ತಾಲ್ಲೂಕು, ಗಾಡಿಕೊಪ್ಪ ಪ್ರದೇಶದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಭಿಸುವ ಬಗ್ಗೆ ಪ್ರಸ್ತಾವನೆ ಇದೆಯೇ? (ವಿವರ ನೀಡುವುದು)

ಪ್ರೊ॥ ಬಿ.ಕೆ. ಚಂದ್ರಶೇಖರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):